doc-392
T.P-2

(1)

R No KRNN 12 1-11-1974

ಸ್ವರ್ಣ ಮಹೋತ್ಸವ ನೆರನೇರಿಸಿದ ಪತ್ರಿಕೆ

in ★ ★ ★ ★ ★
58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಪ್ರಕಾಶಕರು: ಅರಮನೆ ಸಿರಸ್ತೇದಾರ್ ಎಂ. ವಿ. ಕುಪ್ಪಯ್ಯರಾವ್ ಸಂಪಾದಕರು: ಧರ್ಮಪ್ರಚಾರಪರಿವ್ರತ ಎಂ. ಎಸ್. ಕೃಷ್ಣರಾವ್ { 3 ಪೈಸೆ

ಹೋಟಲಿನಲಿ ಯುರೇನಿಯಂ ವಶ

ಒಳನಾಡಿನ
ವಿಮಾನಗಾರಿಕೆ ತರಬೇತಿ ಕೇಂದ್ರ

ಕೃಷ್ಣರಾಜಸಾಗರ, ಮಂಡ್ಯ ಜಿಲ್ಲೆ

ತಾ॥ 1-12-74 ರಿಂದ 29 ನೇ ತಂಡದ ತರಬೇತಿಯು ಮೇಲ್ಕಂಡ ಕೇಂದ್ರದಲ್ಲಿ ಪ್ರಾರಂಭವಾಗುವುದು 20 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ತರಬೇತಿಯು ಮೂರು ತಿಂಗಳ ಅವಧಿಯದಾಗಿದ್ದು ಪ್ರತೀ ವಿದ್ಯಾರ್ಥಿಗೆ ತಿಂಗಳಿಗೆ 90/- ರೂಪಾಯಿ ವಿದ್ಯಾರ್ಥಿ ವೇತನವನ್ನು (ಆಹಾರ ಭತ್ಯವೂ ಸೇರಿ) ಕೊಡಲಾಗುವುದು ತರಬೇತಿಯ ಮಧ್ಯದಲ್ಲಿ ಬಿಟ್ಟು ಬಿಟ್ಟರೆ ಅಂತಹವರಿಂದ ಕೊಡಲ್ಪಟ್ಟ ಭತ್ಯವನ್ನು ಅವರ ಸ್ವಂತ ಜವಾಬ್ದಾರಿಯಿಂದ ವಸೂಲು ಮಾಡಲಾಗುವುದು

ವಿಮಾನ ಪ್ರಾಕಾಣಿಕೆ, ವಿಮಾನ ಜೋಪಾನ, ಸ್ಪೆಲಾಸ್ ಬಲಿಗಳನ್ನು ಆಧುನಿಕ ರೀತಿಯಲ್ಲಿ ನೇಯುವುದು, ಹಂಗೋಲು ಕಟ್ಟುವುದು ಮತ್ತೆ ನಡೆಸುವುದು, ವಿಮಾನ ಹಿಡಿಯುವುದು ಮುಂತಾದ ವಿಷಯಗಳಲ್ಲಿ ತರಬೇತಿ ನೀಡಲಾಗುವುದು

ಅರ್ಜಿದಾರರು ಗಮನಿಸಬೇಕಾದ ಅಂಶಗಳು

1 ವಯಸ್ಸು 21 ವರ್ಷ ಮೇಲ್ಪಟ್ಟು 40 ವರ್ಷದೊಳಗಿರಬೇಕು
2 ಕನ್ನಡ ಓದಲು ಬರೆಯಲು ಬರಬೇಕು
3 ಅರ್ಜಿಗೆ 25 ಪೈಸೆ ಕೋರ್ಟ್ ಫೀ ಸ್ಟ್ಯಾಂಪ್ ಹಚ್ಚಬೇಕು.
4 ಅರ್ಜಿದಾರರು ಈ ಕೆಳಕಂಡ ಜಿಲ್ಲೆಗಳಿಗೆ ಸೇರಿದವರಾಗಿರಬೇಕು
1 ಮೈಸೂರು 2 ಮಂಡ್ಯ 3 ಕೊಡಗು 4 ಹಾಸನ 5 ಚಿಕ್ಕಮಗಳೂರು
6 ಶಿವಮೊಗ್ಗ 7 ಧಾರವಾಡ 8 ಬೆಳಗಾಂ 9 ಬಿಜಾಪುರ
5 ದೃಢಕಾಯ ಹಾಗೂ ವಿಮಾನಗಾರಿಕೆಯಲ್ಲಿ ನಿರತರಾಗಿರುವವರಿಗೆ ಮನ್ನಣೆ ಕೊಡಲಾಗುವುದ
6 ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಆಫೀಸಿನಲ್ಲಿ ತಿಳಿದುಕೊಳ್ಳಬಹುದು
7 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆದು ಅದರಲ್ಲಿ ಆರಿಸಲಾಗುವುದು

ತರಬೇತಿಗೆ ಸೇರಲಿಚ್ಛಿಸುವ ಅಭ್ಯರ್ಥಿಗಳು ಈ ಕೆಳಗೆ ಕಾಣಿಸಿರುವ ನಿಯಮಿತ ಫಾರಂನಲ್ಲಿ ಅರ್ಜಿಯನ್ನು 6-11-1974 ರ ಒಳಗಾಗಿ ಸೀನಿಯರ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್, ವಿಮಾನಗಾರಿಕೆ ತರಬೇತಿ ಕೇಂದ್ರ, ಕೃಷ್ಣರಾಜಸಾಗರ, ಮಂಡ್ಯ ಜಿಲ್ಲೆ ಇವರಿಗೆ ಕಳುಹಿಸಬೇಕು

ಕೆ. ಬಿ ಹನುಮಂತರಾವ್,
ವಿಮಾನಗಾರಿಕೆಯ ಸೀನಿಯರ್ ಅಸಿಸ್ಟೆಂಟ್
ಸೂಪರಿಂಟೆಂಡೆಂಟ್ (ತರಬೇತಿ ಕೇಂದ್ರ) ಕೃಷ್ಣರಾಜಸಾಗರ

ಅರ್ಜಿಯ ನಮೂನೆ

ಒಳನಾಡಿನ ವಿಮಾನಗಾರಿಕೆ ತರಬೇತಿ ಕೇಂದ್ರ, ಕೃಷ್ಣರಾಜಸಾಗರ

1 ವಿದ್ಯಾರ್ಥಿಯ ಹೆಸರು —
2 ತಂದೆಯ ಹೆಸರು —
3 ಹುಟ್ಟಿದ ತಾರೀಖು — (ಹುಟ್ಟಿದ ತಾರೀಖಿಗೆ ಸಂದರ್ಶನದ ವೇಳೆಯಲ್ಲಿ ಶಾಲೆಯ ಸರ್ಟಿಫಿಕೇಟ್‌ನ್ನು ಕೇಳಲಾಗುವುದು)
4 ಜಾತಿ (ಜನಾಂಗ) —
6 ಪೂರ್ಣ ವಿಳಾಸ —

ಸ್ಥಳ —
ತಾರೀಖು —

ಜೆ ಪಿ. ಚಳವಳಿ

ನವದೆಹಲಿ— ಅದ್ಭುತ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ, ಶ್ರೀ ಜಯಪ್ರಕಾಶ ನಾರಾಯಣರು– ಭ್ರಷ್ಟಾಚಾರ, ಹಣದುಬ್ಬರ, ನಿರುದ್ಯೋಗದಿಂದ ಸಂಕಟಕ್ಕೀಡಾಗಿರುವ ದೇಶದ ಮುಖ ಬದಲಾವಣೆಗೆ ಜನತೆ ಪೂರ್ಣ ಕ್ರಾಂತಿಗೆ ಸಿದ್ಧರಾಗಬೇಕೆಂದು ಕರೆಯಿತ್ತರು – ಪ್ರಜಾಪ್ರಭುತ್ವದ ಕತ್ತು ಹಿಸುಕುತ್ತಿರುವ ಸರಕಾರ ಜನರ ಸಂಕಟವನ್ನೆ ತಗ್ಗಿಸಲು ತಕ್ಷಣ ಕಾರ್ಯಕ್ಕೆಗೊಳ್ಳದಿದ್ದರೆ, ಪ್ರಸ್ತುತ ಚಳವಳಿ ದೇಶದಲ್ಲೆಲ್ಲಾ ಹರಡುವುದೆಂದು ಹೇಳಿದರು – ಯುವ ಶಕ್ತಿ ಮುಂದುವರಿಯುತ್ತಿರಬೇಕೆಂದು ಹೇಳಿದರು – ವಿಧಾನ ಸಭೆಯನ್ನು ಡಿಸೆಂಬರು 6 ರೊಳಗೆ ವಿಸರ್ಜಿಸದಿದ್ದಕ್ಕೆ, ಜನತಾ ವಿಧಾನ ಸಭೆ ಸ್ಥಾಪನೆ, ಮತ್ತು ಚುನಾವಣಾ ವ್ಯವಸ್ಥೆ ಕೈಗೊಳ್ಳಲಾಗುವುದೆಂದು ಹೇಳಿದರು – 4 ಸಭೆಗಳಲ್ಲಿ ಮಾತನಾಡಿದರು.

ಪೂರ್ಣಿಯಾ— ಜೆ ಪಿ ಯವರ ಚಳವಳಿ ಕೇವಲ ನಗರಗಳಿಗೆ ಮಾತ್ರವಿರದೆ, ಒಳಕ್ಕೂ ಅದರಲ್ಲೂ ಭಯರಹಿತ ಕಾರ್ಮಿಕರು ಮತ್ತು ಆದಿವಾಸಿ ತರಗತಿಗಳಲ್ಲೂ ನುಗ್ಗಿದೆ

ಸಮಸ್ತಿಪುರ— ಜೆ ಪಿ ಯವರ ಚಳವಳಿಯು ಹೊಸ ಕ್ರಮದ ದಿನ ಹತ್ತಿರವಾಗುತ್ತಿದ್ದು, ಪೋಲೀಸು ಅಧಿಕಾರಿಗಳ, ಜಿಲ್ಲಾ ಮ್ಯಾಜಿಸ್ಟ್ರೇಟರುಗಳ ಮಾಟಂಗುಗಳ ಚಟುವಟಿಕೆಯು ಪ್ರಾರಂಭಿಸಿದೆ.

ಟ್ರಕ್ ತುಂಬ ಅರ್ಜಿಗಳು

ಚಂಡೀಘರ— ಜೈಲ್ ಸರಕಾರವನ್ನು ಡಿಸ್‌ಮಿಸ್ ಮಾಡಬೇಕೆಂಬ ಕೇಳಿಕೆಯ, 40 ಲಕ್ಷಕ್ಕೂ ಹೆಚ್ಚು ಸಹಿಗಳ; ಟ್ರಕ್ ತುಂಬಾ ಅರ್ಜಿಗಳನ್ನು, ವಿರೋಧ ಪಕ್ಷದ ನಾಯಕರು ಗೌರ್ನರರಿಗೆ ತಾ॥ 8 ರಂದು ಅರ್ಪಿಸಲಿರುವರು.

★ ನವದೆಹಲಿ– ಅಮೇರಿಕಾ ಸ್ಟೇಟ್ ಸೆಕ್ರೆಟರಿ ಡಾ॥ ಕಿಸಿಂಗರ್‌ರವರನ್ನೆ ನಡೆಸಿದ ಮಾತುಕತೆಯಿಂದ 1 ಮಿಲಿಯ ಆಹಾರ ಧಾನ್ಯ ದೊರೆಯುವ ಸಂಭವವಿದೆ.

ಇಂದು ಕನ್ನಡ ರಾಜ್ಯೋತ್ಸವ

ವೈಲ್ಡ್ ಅನಾಹುತ – 44 ಸಾವು

ಅಲಹಾಬಾದು— ಸಿಲ್ಚಾರ್‌ಕ್ಕೆ ಹೋಗುತ್ತಿದ್ದ ಉತ್ತರ ಭಾರತ ಎಕ್ಸ್‌ಪ್ರೆಸ್ ರೈಲಿನಲ್ಲಿಯ 2 ನೆ ತರಗತಿ ಗಾಡಿಗೆ ಬೆಂಕಿಹತ್ತಿ 44 ಪ್ರಯಾಣಿಕರು ಸತ್ತು, 3 ನುಂದಿ ಗಾಯಗೊಂಡರು

ಸಮಾಂತರ ವಿಧಾನ ಸಭೆ

ನಾಗಪುರ— ಈಚೆಗೆ ಸ್ಥಾಪಿತವಾದ ಜನಸಂಘರ್ಷ ಸಮಿತಿಯು, ಮಹಾರಾಷ್ಟ್ರ ಶಾಸನಸಭಾ ಪ್ರಾಂಗಣದ ದಿನ ತಾ॥ 8 ರಂದು ನಾಗಪುರದಲ್ಲಿ ಸಮಾಂತರ ವಿಧಾನಸಭೆ ನಡೆಸಲು ಏರ್ಪಡಿಸಿದೆ

ಯುರೇನಿಯಂ ವಶ

ದರ್ಭಂಗ— ಒಂದು ಸುಖಭೋಗ ಹೋಟಲಿನಲ್ಲಿ ಪೋಲೀಸರು ರೂ 60 ಲಕ್ಷ ಬೆಲೆಯ ಯುರೇನಿಯನ್ ವಶಪಡಿಸಿಕೊಂಡು, ಈ ಸಂದರ್ಭದಲ್ಲಿ ಸಂಶಯಗ್ರಸ್ತ ಒಬ್ಬ ಕಳ್ಳಸಾಗಾಣಿಕೆಗಾರನನ್ನು ಬಂಧಿಸಿದರು.

ದೇವಸ್ಥಾನದ ಮಾಲೀಕತ್ವ

ಬೆಂಗಳೂರು– 18 0 ರಲ್ಲಿ ಶ್ರೀ ರಾಮಸ್ವಾಮಯ್ಯ ಎಂಬ ಜಡ್ಜರು ಲಾಲ್‌ಬಾಗ್ ಹತ್ತಿರ ಶ್ರೀ ಆಂಜನೇಯಸ್ವಾಮಿ ದೇವಾಲಯ ಕಟ್ಟಿಸಿದರು – ಅಲ್ಲಿ ಒಬ್ಬ ಪೂಜಾರಿ ಇದ್ದನು – ನಂತರ ಮನೆಯವರಿಗೂ, ಪೂಜಾರಿ ವಂಶಸ್ಥರಿಗೂ ದೇವಸ್ಥಾನದ ಮಾಲೀಕರಲ್ಲಿ 1890ವ್ಯಾಜ್ಯ ಹುಟ್ಟಿ ನೊಖದ್ದನೆ ನೊಖದ್ದನೆ ಪ್ರಾರಂಭವಾಯಿತು – 84 ವರ್ಷಗಳ ನಂತರ ಅದ್ಯ ಈಗ ತೀರ್ಮಾನವಾಯಿತು – ಪ್ರಥಮತಃ ಮುನ್ಸೀಫ್ ಕೋರ್ಟಿನಲ್ಲಿ ಮನೆಯವರ ಪರ ತೀರ್ಪು ಕೊಡಲಾಗಿತ್ತು – ಅಡಿಷನಲ್ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಅದು ರದ್ದು ಪಡಿಸಲ್ಪಟ್ಟಿತ್ತು, ಪೂಜಾರಿ ವಂಶಸ್ಥರ ಪರ ತೀರ್ಪು ಕೊಡಲಾಯಿತು – ಇದರ ಮೇಲೆ ಇದು ಹೈ ಕೋರ್ಟಿಗೆ ಬಂದು, ಮನೆಯವರ ಪರ ಮಾಲೀಕತ್ವ ಸ್ಥಿರಗೊಳಿಸಲ್ಪಟ್ಟಿತು

ಕೇಂದ್ರ ವಿಶಾಸಲು ಪೋಲೀಸರು

ಶನಿವಹಿಲಿ– ಕೇಂದ್ರ ವಿಶಾಸಲು ಪೋಲೀಸರಿಗೆ ರಾಜ್ಯಗಳಿಂದ ಕೇಳಿಕೆ ಹೆಚ್ಚಾಗಿದೆ ಎಂದು ಡೈರೆಕ್ಟರು ಜನರಲ್ ಶ್ರೀ ಸಾಕ್ಸೇನಾರವರು ಹೇಳಿದರು – ಈ ಪೈಕಿ ಬೀಹಾರು ಮುಖ್ಯವಾಗಿದ್ದು ಅಲ್ಲಿ ೩ ಬೆಟಾಲಿಯನ್ ಇಡಲಾಗಿದೆ ಎಂದೂ, ಮತ್ತು ಎಲ್ಲೆಲ್ಲಿ ದಷಲಾಗಿದೆಯೊ, ಆ ರಾಜ್ಯಗಳು ಅವುಗಳನ್ನು ಅಲ್ಲಿಂದ ತೆಗೆಯಲು ಇಚ್ಛಿಸುತ್ತಿಲ್ಲವೆಂದೂ ಹೇಳಿದರು.

ಉಪರಾಷ್ಟ್ರಪತಿಯವರಿಗೆ ಸನ್ಮಾನ

ಮೈಸೂರು– ಭಾರತ ಉಪರಾಷ್ಟ್ರಪತಿಯವರಾದ ಮಾನ್ಯ ಶ್ರೀ ಬಿ. ಡಿ. ಜತ್ತಿ ಯವರಿಗೆ ನಿನ್ನೆ ಟೌನ್ ಹಾಲ್‌ನಲ್ಲಿ, ಮೈಸೂರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀಮಾನ್ ಬಿ ಎಸ್ ಕೆಂಗೇಗೌಡರ ಅಧ್ಯಕ್ಷತೆಯಲ್ಲಿ, ಸನ್ಮಾನ ಸಮಾರಂಭವನ್ನು ಮೈಸೂರು ನಗರದ ನಾಗರೀಕ ಸನ್ಮಾನ ಸಮಿತಿಯು ಏರ್ಪಡಿಸಿತ್ತು. ಅಧ್ಯಕ್ಷರು ಉಪರಾಷ್ಟ್ರಪತಿಯವರಿಗೆ ಬಿನ್ನವತ್ತಳೆ ಸಲ್ಲಿಸಿ, ಬೆಳ್ಳಿಯ ಮೆಂಟಸದ ಕರಂಡವನ್ನು ಅರ್ಪಿಸಿ, ಮೈಸೂರುನಗರದಲ್ಲಿ ನೆಹರೂಬೋಕ ಮತ್ತು ಬಾಲಭವನಗಳಂತಹ ಯೋಜನೆಗಳನ್ನು ಸ್ಥಾಪಿಸುವುದರ ಮೂಲಕ ಮೈಸೂರು ನಗರ ಮುಂದುವರಿಯುವದಕ್ಕೆ ಸಹಾಯಮಾಡಬೇಕೆಂದರು.

ಉಪರಾಷ್ಟ್ರಪತಿಯವರಿಂದ ಉದ್ಘಾಟನೆ

ಮೈಸೂರು– ಭಾರತ ಉಪಾಧ್ಯಕ್ಷರಾದ ಘನತೆವೆತ್ತ ಶ್ರೀ ಬಿ ಡಿ ಜತ್ತಿಯವರಿಂದ ನಿನ್ನೆ ಮಾನಸಗಂಗೋತ್ರಿಯಲ್ಲಿ– ಮೈಸೂರು ವಿಶ್ವವಿದ್ಯಾನಿಲಯದ ಮನಶ್ಶಾಸ್ತ್ರ ವಿಭಾಗದ ಸುವರ್ಣ ಮಹೋತ್ಸವ ಸಮಾರಂಭದ ಉದ್ಘಾಟನೆಯೂ, ಮಾನಸಗಂಗೋತ್ರಿ ಸ್ನಾತಕೋತ್ತರ ಹಿಂದಿ ವಿಭಾಗದ ದತ್ತಿಗಳೂ ಹಾಗೂ ಚಿನ್ನದ ಪದಕ ಪ್ರತಿಷ್ಠಾಪನೆಯೂ, ಮಹಾತ್ಮಾ ಮತ್ತು ಅಂಜಲಿ ಗ್ರಂಥಗಳ ಬಿಡುಗಡೆಯೂ, ಹೊಸದಾಗಿ ನಿರ್ಮಿತವಾಗಿರುವ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಕಟ್ಟಡದ ಉದ್ಘಾಟನೆಯೂ ನೆರವೇರಿತು.

ಪ್ರಾಣಿ ಧಾಮ

ಮೈಸೂರು— ನಾಗರಹೊಳೆ ಪ್ರಾಣಿಧಾಮದಲ್ಲಿ ಕಾಡುಕೋಣಗಳ ಸಂಖ್ಯೆ ತುಂಬಾ ಹೆಚ್ಚಿ — ಕಬಿನಿಗೂ ಪ್ರಾಣಿಧಾಮ ವಿಸ್ತರಿಸಲು ಯೋಜಿಸಲಾಗಿದೆ.

ಕಚೇರಿಗಳ ಸ್ಥಳಾಂತರ

ಬೆಂಗಳೂರು– ಇದುವರೆಗೆ ವಿಧಾನಸೌಧದ ಮೂರನೇ ಅಂತಸ್ತಿನಲ್ಲಿ ನೆಲೆಸಿದ್ದ ಚಿಕ್ಕ ಉಳಿತಾಯ ಶಾಖೆಯ ನಿರ್ದೇಶಕರ ಮತ್ತು ಕರ್ನಾಟಕ ರಾಜ್ಯ ಲಾಟರಿ ಶಾಖೆಗಳ ಕಾರ್ಯಾಲಯಗಳನ್ನು ಬೆಂಗಳೂರಿನ ಪ್ಯಾಲೇಸು ರಸ್ತೆಯಲ್ಲಿರುವ 64 ನೇ ನಂಬರಿನ ಕಟ್ಟಡಕ್ಕೆ ಇವೇ ಅಕ್ಟೋಬರು 29 ರಂದು ಸ್ಥಳಾಂತರಿಸಲಾಗಿದೆ.

Help The Gorakshana

— Humanitarian Propoganda Monthly —

ಪೂರ್ಣ ನಿಶೇಧವಾಗಲಿ
ಭಾರತದಲ್ಲಿ ಗೋವಧೆ

Rugs, Sweaters & Kashmir Coats

ರಗ್ಗು, ಸ್ವೆಟರು, ಕಾಶ್ಮೀರ್ ಕೋಟುಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್

A Fair Price Shop in Actual Practice

ವುಡ್‌ಲಾಂಡ್

ಅಮೋಘ 7 ನೇ ವಾರ
ಇಮ್ತಿಹಾನ್ ● Imtihan

★ ತನುಜ ★ ವಿನೋದ ಖನ್ನ ★ ಬಿಂದು

ಅಭಿನಯಿಸಿರುವ ಅಮೋಘ ಹಿಂದಿ ವರ್ಣರಂಜಿತ ಕಲಾಕೃತಿ

ನಿರ್ದೇಶನ – ಮದನ್ ಸಿಂಹ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ ೫ ಪ್ರದರ್ಶನಗಳು

ಅಪೆರಾ 1 11 74 ರಿಂದ

ರಾಜಕುಮಾರ್ ಕಲ್ಯಾಣ ಕುಮಾರ್

ಅಭಿನಯಿಸಿರುವ ಅಮೋಘ ಕನ್ನಡ ಚಿತ್ರ

ಭೂಕೈಲಾಸ

ದಿನ ಪ್ರದರ್ಶನಗಳು

SHAKTI
SUDHA

A Superb Tonic

Contribute Liberally
to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore